ನೋಂದಣಿ ಸಂಖ್ಯೆ : ಡಿ.ವೈ.ಆರ್.270
ದಿನಾಂಕ : 16-09-1963

ಬ್ಯಾಂಕಿಂಗ್ ವ್ಯವಹಾರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD KA 912 P, Dt. 11-11-1987
ಆಡಳಿತ ಕಚೇರಿ ಸ್ಥಳಾಂತರಕ್ಕೆ ಆರ್.ಬಿ.ಐ. ನೀಡಿರುವ ಲೈಸೆನ್ಸ್ ನಂ.
UBD BG BL AO 394, Dt. 22-06-2000

**TGMC BANK**

ನಿಮ್ಮ ನಂಬಿಕೆಯೇ ನಮ್ಮ ಆಸ್ತಿ

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು - 572 103.
ದೂರವಾಣಿ : 0816-4021102/03
e-mail : tgmc.ho@tgmcbank.com
website : www.tgmcbank.com

# 2023-24ನೇ ಸಾಲಿನ 61ನೇ ವಾರ್ಷಿಕ ಸಾಮಾನ್ಯ ಸಭೆಯ

## ಆಹ್ವಾನ ಪತ್ರಿಕೆ

**ಸೆಪ್ಟೆಂಬರ್ 01, 2024ನೇ ಭಾನುವಾರ**

Book-Post

ಶ್ರೀಮತಿ/ಶ್ರೀ

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.

## ವಾರ್ಷಿಕ ಸಾಮಾನ್ಯ ಸಭೆಯ ಕಾರ್ಯಕಲಾಪಗಳು

1. ದೇವತಾ ಪ್ರಾರ್ಥನೆ.
2. ದೈವಾಧೀನರಾದ ಬ್ಯಾಂಕಿನ ಸದಸ್ಯರುಗಳಿಗೆ ಶ್ರದ್ಧಾಂಜಲಿ.
3. ಸ್ವಾಗತ.
4. 61ನೇ ವಾರ್ಷಿಕ ಸಾಮಾನ್ಯ ಸಭೆಯ ಆಹ್ವಾನ ಪತ್ರಿಕೆಯನ್ನು ಓದಿ ದಾಖಲಿಸುವುದು.
5. ಹಿಂದಿನ ಸಾಮಾನ್ಯ ಸಭೆಯ ನಡವಳಿಕೆಯನ್ನು ಓದಿ ದೃಢೀಕರಿಸುವುದು.
6. 2023–24ನೇ ಸಾಲಿನ ಆಡಳಿತ ಮಂಡಳಿಯ ವಾರ್ಷಿಕ ವರದಿಯನ್ನು ಪರಿಶೀಲಿಸುವುದು ಮತ್ತು ಮುಂದಿನ ವರ್ಷದ ಕಾರ್ಯ ಯೋಜನೆಗಳಿಗೆ ಅನುಮೋದನೆ ಪಡೆಯುವುದು.
7. 2023–24ನೇ ಸಾಲಿನ ಶಾಸನಬದ್ಧ ಲೆಕ್ಕ ಪರಿಶೋಧನಾ ವರದಿ ಮತ್ತು ಆಡಳಿತ ಮಂಡಳಿಯವರ ಅನುಪಾಲನಾ ವರದಿಯನ್ನು ಪರಿಶೀಲಿಸುವುದು.
8. 2023–24ನೇ ಸಾಲಿನ ಖರ್ಚು ವೆಚ್ಚಗಳನ್ನು ಅನುಮೋದಿಸುವುದು ಹಾಗೂ 2024–25ನೇ ಸಾಲಿನ ಮುಂಗಡ ಪತ್ರ ಮಂಜೂರು ಮಾಡುವುದು.
9. ನಿವ್ವಳ ಲಾಭದ ವಿಲೇವಾರಿ, ನಿರ್ದಿಷ್ಟ ಮೀಸಲು ಮತ್ತು ಇತರೆ ನಿಧಿಗಳನ್ನು ಸೃಜಿಸುವುದು.
10. ಉಪವಿಧಿಗಳ ತಿದ್ದುಪಡಿ.
11. ಬ್ಯಾಂಕಿಗೆ ಸದಸ್ಯರನ್ನು ಸೇರಿಸಿಕೊಂಡ ಮತ್ತು ಸದಸ್ಯತ್ವದಿಂದ ಸಮಾಪನೆ ಮಾಡಿರುವ ಬಗ್ಗೆ.
12. ಸಭಾಧ್ಯಕ್ಷರ ಅನುಮತಿಯ ಮೇರೆಗೆ ಚರ್ಚಿಸಬಹುದಾದ ವಿಷಯಗಳು.
13. ಅಧ್ಯಕ್ಷರ ಭಾಷಣ.
14. ವಂದನಾರ್ಪಣೆ.

**ಸದಸ್ಯರು ಮತ್ತು ವಿಶೇಷ ಆಹ್ವಾನಿತರಿಗೆ ಮಾತ್ರ**

**: ಉಪಹಾರ :**

ಸಮಯ ಬೆಳಿಗ್ಗೆ 8–00 ರಿಂದ 10–00 ಗಂಟೆಯವರೆಗೆ

**-: ಕಾರಣಾಂತರಗಳಿಂದ ಬದಲಾವಣೆಗೊಂಡ ಸ್ಥಳದಲ್ಲಿ :-**

**ಶ್ರೀ ಸಿದ್ಧಿವಿನಾಯಕ ಸಮುದಾಯ ಭವನ,**

ವಿನಾಯಕ ನಗರ, ತುಮಕೂರು

# ತುಮಕೂರು ಗ್ರೈನ್ ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ : ಬಿ.ಹೆಚ್. ರಸ್ತೆ, ತುಮಕೂರು – 572 103.

# 61ನೇ ವಾರ್ಷಿಕ ಸಾಮಾನ್ಯ ಸಭೆಯ

## ಆಹ್ವಾನ ಪತ್ರಿಕೆ

ದಿನಾಂಕ 01–09–2024ನೇ ಭಾನುವಾರ ಬೆಳಿಗ್ಗೆ 10:30 ಗಂಟೆಗೆ ಸರಿಯಾಗಿ ಬ್ಯಾಂಕಿನ 61ನೇ ವಾರ್ಷಿಕ ಸಾಮಾನ್ಯ ಸಭೆಯನ್ನು ತುಮಕೂರಿನ, ವಿನಾಯಕ ನಗರದಲ್ಲಿರುವ

**ಶ್ರೀ ಸಿದ್ಧಿವಿನಾಯಕ ಸಮುದಾಯ ಭವನದಲ್ಲಿ**

ಬ್ಯಾಂಕಿನ ಅಧ್ಯಕ್ಷರಾದ

**ಶ್ರೀ ಹೆಚ್.ಎಂ. ದಿವ್ಯಾನಂದಮೂರ್ತಿ**

ಇವರ ಘನ ಅಧ್ಯಕ್ಷತೆಯಲ್ಲಿ ನಡೆಸಲು ಏರ್ಪಡಿಸಲಾಗಿದೆ.
ಮಾನ್ಯ ಸದಸ್ಯರೆಲ್ಲರೂ ಸಕಾಲಕ್ಕೆ ಆಗಮಿಸಬೇಕಾಗಿ ವಿನಂತಿ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ

ದಿನಾಂಕ : 23–07–2024
ಸ್ಥಳ : ತುಮಕೂರು

**ಜೆ. ಸುರೇಶ್**
ಮುಖ್ಯ ಕಾರ್ಯನಿರ್ವಾಹಕರು

## ಉಪವಿಧಿಗಳ ತಿದ್ದುಪಡಿ

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 1. | 22.5 | ಕಿಡ್ನಿ, ಹೃದಯ ತೊಂದರೆ, ಕ್ಯಾನ್ಸರ್, Liver transplantation, Knee joint replacement ನಂತಹ Major ಶಸ್ತ್ರಚಿಕಿತ್ಸೆಗಳಿಗೆ ಒಳಪಟ್ಟಿರುವ ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳಿಗೆ ರೂ.5,000/-ಗಳಿಂದ ರೂ.50,000/-ಗಳಿಗೆ ಮೀರದಂತೆ, ಸದಸ್ಯರ ಹಾಗೂ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಖಾಯಿಲೆಯ ತೀವ್ರತೆ ಮತ್ತು ವೈದ್ಯಕೀಯ ದೃಢೀಕರಣ ಪತ್ರವನ್ನು ಪರಿಗಣಿಸಿ ಸಹಾಯ ಧನ ನೀಡಬಹುದು. | ಕಿಡ್ನಿ, ಹೃದಯ, ಕ್ಯಾನ್ಸರ್, Liver transplantation, Knee joint replacement ಇವುಗಳ Major ಶಸ್ತ್ರ ಚಿಕಿತ್ಸೆಗಳಿಗೆ ಒಳಪಟ್ಟಿರುವ ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳಿಗೆ ರೂ.5,000/-ಗಳಿಂದ ರೂ.50,000/-ಗಳಿಗೆ ಮೀರದಂತೆ ಕನಿಷ್ಠ 50 ಷೇರುಗಳನ್ನು ಹೊಂದಿರುವ ಹಾಗೂ ಶಸ್ತ್ರ ಚಿಕಿತ್ಸೆಯಾಗಿ ಆರು ತಿಂಗಳ ಒಳಗೆ ದಾಖಲೆಗಳನ್ನು ಸಲ್ಲಿಸುವ ಸದಸ್ಯರಿಗೆ, ಸದಸ್ಯರ ಹಾಗೂ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಅಥವಾ ಬ್ಯಾಂಕಿನ ಲಾಭ-ನಷ್ಟದ ಖಾತೆಗೆ ಖರ್ಚು ಹಾಕಿ ಖಾಯಿಲೆಯ ತೀವ್ರತೆ ಮತ್ತು ವೈದ್ಯಕೀಯ ದೃಢೀಕರಣ ಪತ್ರವನ್ನು ಪರಿಗಣಿಸಿ ಸಹಾಯಧನ ನೀಡಬಹುದು. | ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ |

| ಕ್ರಮ ಸಂಖ್ಯೆ | ಹಾಲಿ ಉಪ ವಿಧಿಗಳ ಸಂಖ್ಯೆ | ಹಾಲಿ ಇರುವುದು | ತಿದ್ದುಪಡಿಗೆ ಸೂಚಿಸಿರುವುದು | ತಿದ್ದುಪಡಿಗೆ ಕಾರಣ |
|---|---|---|---|---|
| 2. | 22.6 | ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳ ವೈದ್ಯಕೀಯ ತಪಾಸಣೆ ಹಾಗೂ ಶುಷ್ರೂಷೆಗಾಗಿ ನಡೆಸುತ್ತಿರುವ "ಟಿ ಜಿ ಎಂ ಛಾರಿಟಬಲ್ ಟ್ರಸ್ಟ್" ನಿಂದ ಸದಸ್ಯರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಕಾರ್ಯಕಾರಿ ಮಂಡಳಿಯು ಪ್ರತಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ವಾರ್ಷಿಕ ರೂ.1,500/-ಗಳಿಗೆ ಮೀರದಂತೆ ಕೊಡಬಹುದು. | ಬ್ಯಾಂಕಿನಲ್ಲಿ ಕನಿಷ್ಠ 50 ಷೇರುಗಳನ್ನು ಹೊಂದಿರುವ ಸದಸ್ಯರಿಗೆ, ಬ್ಯಾಂಕಿನ ಸದಸ್ಯರು ಮತ್ತು ಸಿಬ್ಬಂದಿಗಳ ವೈದ್ಯಕೀಯ ತಪಾಸಣೆ ಹಾಗೂ ಶುಷ್ರೂಷೆಗಾಗಿ ನಡೆಸುತ್ತಿರುವ "ಟಿ ಜಿ ಎಂ ಛಾರಿಟಬಲ್ ಟ್ರಸ್ಟ್" ನಿಂದ ಸದಸ್ಯರು ಹಾಗೂ ಬ್ಯಾಂಕಿನ ಸಿಬ್ಬಂದಿ ವರ್ಗದವರ ಕ್ಷೇಮನಿಧಿಯಿಂದ ಅಥವಾ ಬ್ಯಾಂಕಿನ ಲಾಭ-ನಷ್ಟದ ಖಾತೆಗೆ ಖರ್ಚು ಹಾಕಿ ಕಾರ್ಯಕಾರಿ ಮಂಡಳಿಯು ಪ್ರತಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ವಾರ್ಷಿಕ ರೂ.1,500/-ಗಳಿಗೆ ಮೀರದಂತೆ ಕೊಡಬಹುದು. | ಬ್ಯಾಂಕಿನ ಆರ್ಥಿಕ ಪರಿಸ್ಥಿತಿಗೆ ಅನುಗುಣವಾಗಿ |
| 3. | 24(ಅ)(1)<br>(ಅ) | ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು:-<br>ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಎರಡು ಸಾವಿರದ ಐದು ನೂರು ರೂಪಾಯಿಗಳು: ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ. | ಸದಸ್ಯನು ಬಳಸಿಕೊಳ್ಳಬೇಕಾದ ಕನಿಷ್ಠ ಸೇವೆಗಳು ಅಥವಾ ಸೌಲಭ್ಯಗಳು:-<br>ಸದಸ್ಯನು ಹೊಂದಿರತಕ್ಕ ಕನಿಷ್ಠ ಠೇವಣಿಯು ಒಂದು ಸಾವಿರ ರೂಪಾಯಿಗಳು : ಅಥವಾ ಸದಸ್ಯನು ಸಾಲ ಪಡೆಯಲು ಅಗತ್ಯವಿದ್ದಲ್ಲಿ ಬ್ಯಾಂಕು ನಿರ್ಧರಿಸಿದ ಮಿತಿಗೆ ಒಳಪಟ್ಟು ಸದಸ್ಯನ ಕೋರಿಕೆಯ ಮೊತ್ತ. | ಬ್ಯಾಂಕಿನ ಆಡಳಿತಾತ್ಮಕ ಕಾರಣಕ್ಕಾಗಿ |

## : ಸೂಚನೆಗಳು :

1. ವಾರಸುದಾರರ ಬದಲಾವಣೆ ಇದ್ದಲ್ಲಿ ಕೂಡಲೇ ನೋಂದಾಯಿಸಲು ಕೋರಲಾಗಿದೆ.
2. ಬ್ಯಾಂಕಿನ ಸದಸ್ಯರುಗಳಲ್ಲಿ ಕೆಲವರು ದೈವಾಧೀನರಾಗಿದ್ದು, ಅವರಿಗೆ ಸಂಬಂಧಪಟ್ಟವರು ಸೂಕ್ತ ದಾಖಲೆಗಳನ್ನು ಒದಗಿಸಿ ಮೃತರ ಹೆಸರಿನಲ್ಲಿರುವ ಷೇರು ಮೊಬಲಗನ್ನು ಶೀಘ್ರವೇ ಪಡೆಯಲು ಕೋರಿದೆ. ಮರಣೋತ್ತರ ಸಹಾಯ ನಿಧಿಯನ್ನು ಸದಸ್ಯರು ದೈವಾಧೀನರಾದ ದಿನಾಂಕದಿಂದ 2 ವರ್ಷಗಳೊಳಗಾಗಿ ಪಡೆಯತಕ್ಕದ್ದು.
3. ಷೇರು ಪ್ರಮಾಣ ಪತ್ರಗಳನ್ನು ಇದುವರೆಗೆ ಪಡೆಯದೆ ಇರುವ ಸದಸ್ಯರು ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಪಡೆಯಲು ಕೋರಿದೆ.
4. ಆಡಳಿತ ವರದಿ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿ ದಿನಾಂಕ 19-08-2024 ರಿಂದ ನೀಡಲಾಗುವುದು. ಪರ್ಯಾಯ ವ್ಯವಸ್ಥೆಯಾಗಿ ಇ-ಮೇಲ್ ವಿಳಾಸ ನೀಡಿದ ಸದಸ್ಯರಿಗೆ soft copy ಮುಖಾಂತರ ಕಳುಹಿಸಲಾಗುವುದು ಹಾಗೂ ವೆಬ್‌ಸೈಟ್‌ನಲ್ಲಿ ಆಡಳಿತ ವರದಿಯನ್ನು ಪ್ರಕಟಿಸಲಾಗುವುದು.
5. ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳಿದ್ದಲ್ಲಿ ಸದಸ್ಯರು ದಿನಾಂಕ 28-08-2024 ರೊಳಗೆ ಮುಖ್ಯ ಕಾರ್ಯನಿರ್ವಾಹಕರಿಗೆ ಲಿಖಿತ ಮೂಲಕ ಸಲ್ಲಿಸಲು ಕೋರಿದೆ.
6. ವಾರ್ಷಿಕ ಸಾಮಾನ್ಯ ಸಭೆಗೆ ಹಾಜರಾಗಲು ಗುರುತಿನ ಚೀಟಿ ಕಡ್ಡಾಯವಾಗಿದ್ದು, ಸದಸ್ಯತ್ವದ ಗುರುತಿನ ಚೀಟಿಯನ್ನು ಪಡೆಯದೇ ಇರುವ ಸದಸ್ಯರು ತಮ್ಮ ಭಾವಚಿತ್ರವನ್ನು ಸಲ್ಲಿಸಿ ಗುರುತಿನ ಚೀಟಿಯನ್ನು ಪಡೆಯಲು ಕೋರಿದೆ.

**ಸಿ.ಆರ್. ನಟರಾಜ್**
ಉಪಾಧ್ಯಕ್ಷರು

**ಹೆಚ್.ಎಂ. ದಿವ್ಯಾನಂದಮೂರ್ತಿ**
ಅಧ್ಯಕ್ಷರು